ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ರಾಜ್ಯದ ಸರ್ಕಾರಿ ಆಸ್ಪತ್ರೆಗಳಿಗೆ ಸ್ಥಳೀಯ ಶಾಸಕರ ಅಧ್ಯಕ್ಷತೆಯಲ್ಲಿ ಸಂದರ್ಶಕ ಸಮಿತಿಗಳನ್ನು ರಚಿಸಲಾಗುವುದೇ?

ಆ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಸಂದರ್ಶಕ ಸಮಿತಿಯನ್ನು ರಚಿಸದಿರಲು ಕಾರಣಗಳೇನು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು):-

ಅ) ಹೌದು.

ಆ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆಗೆ ಸಂದರ್ಶಕ ಸಮಿತಿಯನ್ನು ರಚಿಸಲಾಗುತ್ತಿದೆ.

ವಿಷಯ:- ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಅಭಿವೃದ್ಧಿ ಕೆಲಸಗಳು ಸ್ಥಗಿತಗೊಂಡಿರುವ ಬಗ್ಗೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 125 (266)

ಶ್ರೀ ಕೆ.ಎಸ್.ಈಶ್ವರಪ್ಪ (ಶಿವಮೊಗ್ಗ):- ಮಾನ್ಯ ಆರೋಗ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಶಿವಮೊಗ್ಗದ ಮೆಗ್ಗಾನ್ ಆಸ್ಪತ್ರೆ ಅಭಿವೃದ್ಧಿಗೆ ಸರ್ಕಾರದವರು ಯೋಜಿಸಿರುವ ಒಟ್ಟು ಹಣ ಎಷ್ಟು?

ಆ) ಅಭಿವೃದ್ಧಿ ಸ್ಥಗಿತಗೊಂಡಿರುವುದಕ್ಕೆ ಕಾರಣವೇನು? ಪೂರ್ಣ ಕೆಲಸವನ್ನು ಯಾವಾಗ ಮುಗಿಸಲಾಗುವುದು?

ಡಾ॥ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟಂಬ ಕಲ್ಯಾಣ ಸಚಿವರು):-

ಅ) ಒಟ್ಟು ಅಂದಾಜು ಮೊತ್ತ 18.50 ಕೋಟಿ ರೂಪಾಯಿಗಳು.

ಆ) ಕೆಲಸವು ಪ್ರಗತಿಯಲ್ಲಿದೆ, ಎಂದು ಮುಖ್ಯ ಇಂಜಿನಿಯರು ದಕ್ಷಿಣ ಬೆಂಗಳೂರು, ಇವರು ಪ್ರಗತಿ ವರದಿ ಸಲ್ಲಿಸಿದ್ದು, ಬಾಕಿ ಉಳಿದಿರುವ ಕಟ್ಟಡ ಕಾಮಗಾರಿಗಳನ್ನು ಶೀಘ್ರವಾಗಿ ಮುಗಿಸಲು ಕ್ರಮ ತೆಗೆದುಕೊಳ್ಳಲಾಗುವುದು.

ವಿಷಯ:- ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಕಿರು ನೀರು ಸರಬರಾಜು ಯೋಜನೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 126 (208)

ಶ್ರೀ ಟಿ.ಬಿ.ಜಯಚಂದ್ರ (ಕಳ್ಳಂಬೆಳ್ಳ):- ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು

ಪಂಚಾಯತ್ ರಾಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಮೂರು ತಾಲ್ಲೂಕಿನ ಪ್ರವೇಶವನ್ನೊಳಗೊಂಡ ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಅಪೂರ್ಣಗೊಳಿಸಿರುವ ಎಂಡಬ್ಲ್ಯುಎಸ್, ಎನ್‌ಆರ್‌ಡಬ್ಲ್ಯುಎಸ್ ಮತ್ತು ಎಆರ್‌ಡಬ್ಲ್ಯುಎಸ್ ನೀರು ಸರಬರಾಜು ಯೋಜನೆಗಳಾವುವು?

ಆ) ಅವುಗಳಲ್ಲಿ ಯಾವಯಾವ ಸಾಲಿನಲ್ಲಿ ಮಂಜೂರಾತಿಯನ್ನು ನೀಡಲಾಗಿದೆ ಮತ್ತು ಈಗಾಗಲೇ ಎಷ್ಟು ಹಣವನ್ನು ಖರ್ಚು ಮಾಡಲಾಗಿದೆ (ವಿವರವಾಗಿ ತಿಳಿಸುವುದು)

ಇ) ಕುಡಿಯುವ ನೀರಿಗೆ ತೀವ್ರ ಅಭಾವವಿದ್ದಾಗ್ಯೂ ಸಹ ಯೋಜನೆಗಳನ್ನು ಪೂರ್ಣಗೊಳಿಸದಿರಲು ಕಾರಣವೇನು? ಮತ್ತು ಯಾವ ಅವಧಿಯಲ್ಲಿ ನಿರ್ದಿಷ್ಟವಾಗಿ ಪೂರ್ಣಗೊಳಿಸಲಾಗುವುದು?

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):-

ಅ) ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಮೂರು ತಾಲ್ಲೂಕುಗಳಾದ ಗುಬ್ಬಿ, ಶಿರಾ ಹಾಗೂ ಚಿಕ್ಕನಾಯ್ಕನ ಹಳ್ಳಿಗಳಲ್ಲಿ ಅಪೂರ್ಣಗೊಳಿಸಿರುವ ಕುಡಿಯುವ ನೀರಿನ ಯೋಜನೆಗಳು ಈ ಕೆಳಕಂಡಂತೆ ಇರುತ್ತವೆ.

1) ಎಂ.ಡಬ್ಲ್ಯು.ಎಸ್ (ಕಿರುನೀರು ಸರಬರಾಜು ಯೋಜನೆ)

1. ಗುಬ್ಬಿ ತಾಲ್ಲೂಕು- ಯಾವುದೂ ಇಲ್ಲ.

2. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು- ಯಾವುದೂ ಇಲ್ಲ.

3. ಶಿರಾ ತಾಲ್ಲೂಕು - 5 ಯೋಜನೆಗಳು.

ಅವುಗಳು: 1.ಜೋಡಿದೇವರಹಳ್ಳಿ, 2.ಮುದಿಮಡು, 3.ಗಂಜಲಗುಂಟೆ, ಕುರುಬರಹಳ್ಳಿ : ಬೋರಯ್ಯನಪಾಳ್ಯ, 5. ಹುಯಲೆದೊರೆ ಕಾವಲ್.

2) ಎನ್.ಆರ್.ಡಬ್ಲ್ಯು.ಎಸ್ (ರಾಜ್ಯವಲಯ)

1. ಗುಬ್ಬಿ ತಾಲ್ಲೂಕು- ಯಾವುದೂ ಇಲ್ಲ.

2. ಚಿಕ್ಕನಾಯ್ಕನಹಳ್ಳಿ ತಾ:- ಯಾವುದೂ ಇಲ್ಲ.

3. ಶಿರಾ ತಾಲ್ಲೂಕು - 3 ಯೋಜನೆಗಳು.

ಅವುಗಳು: 1.ಕಿಲಾರದ ಹಳ್ಳಿ, 2.ಬ್ರಹ್ಮಸಂದ್ರ, 3.ರಾಮಲಿಂಗಾಪುರ.

3) ಎ.ಆರ್.ಡಬ್ಲ್ಯು.ಎಸ್ (ಕೇಂದ್ರ ವಲಯ)

1. ಗುಬ್ಬಿ ತಾಲ್ಲೂಕು - ಯಾವುದೂ ಇಲ್ಲ.

2. ಚಿಕ್ಕನಾಯ್ಕನಹಳ್ಳಿ ತಾಲ್ಲೂಕು - 1 ಯೋಜನೆ.

1. ಬೆಳ್ಳಾರೆ.

3. ಶಿರಾ ತಾಲ್ಲೂಕು - 4 ಯೋಜನೆಗಳು.

ಅವುಗಳು: 1.ಹುಣಿಸೇಕಟ್ಟೆ, 2.ತುಪ್ಪದಕೋನ, 3.ಕಾಳಗಂಧ, 4.ಶಾಬದಡು.

ಆ) ವಿವರಗಳನ್ನೊಳಗೊಂಡ ಪಟ್ಟಿಯನ್ನು ಲಗತ್ತಿಸಿದೆ.

ಇ) ಕಿರುನೀರು ಸರಬರಾಜು ಯೋಜನೆ ಹಾಗೂ ಕೊಳಾಯಿ ನೀರು ಸರಬರಾಜು ಯೋಜನೆಗೆ ಈಗಾಗಲೇ ಕೊಳವೆಬಾವಿ ಕೊರೆದು ನೀರು ಶುದ್ಧತೆಯ ಪರೀಕ್ಷೆಗೆ ಕಳುಹಿಸಲಾಗಿದೆ. ಈ ಯೋಜನೆಗಳನ್ನು 1996-97ನೇ ಸಾಲಿನಲ್ಲಿ ಪೂರ್ಣಗೊಳಿಸಲು ಯೋಜಿಸಲಾಗಿದೆ.

(ಕಳ್ಳಂಬೆಳ್ಳ ಕ್ಷೇತ್ರದಲ್ಲಿರುವ ಅಪೂರ್ಣಗೊಂಡಿರುವ ಕಾಮಗಾರಿಗಳ ವಿವರ)

ಕ್ರಮ ಸಂಖ್ಯೆ	ತಾಲ್ಲೂಕು	ಯೋಜನೆಯ ಗ್ರಾಮ
1	2	3
ಅ) ಎಂ.ಡಬ್ಲ್ಯು.ಎಸ್ (ಕಿರುನೀರು ಸರಬರಾಜು ಯೋಜನೆ)		
1.	ಗುಬ್ಬಿ	-
2.	ಚಿಕ್ಕನಾಯಕನಹಳ್ಳಿ	-
3.	ಶಿರಾ	(ಅ) ಜೋಡಿದೇವರಹಳ್ಳಿ (ಆ) ಮುದಿಮಡು (ಇ) ಗಂಜಲಗುಂಟೆ (ಈ) ಕುರುಬರಹಳ್ಳಿ, ಬೋರಯ್ಯನ ಪಾಳ್ಯ (ಉ) ಹುಯಲ್‌ದೊರೆ ಕಾವಲ್
ಆ) ಎನ್.ಆರ್.ಡಬ್ಲ್ಯು.ಎಸ್ (ರಾಷ್ಟ್ರೀಯ ಗ್ರಾಮಾಂತರ ನೀರು ಸರಬರಾಜು)		
1.	ಗುಬ್ಬಿ ತಾಲ್ಲೂಕು	-
2.	ಚಿಕ್ಕನಾಯ್ಕನಹಳ್ಳಿ	-
3.	ಶಿರಾ	(ಅ) ಕಿಲಾರದ ಹಳ್ಳಿ, (ಆ) ಬ್ರಹ್ಮಸಂದ್ರ, (ಇ) ರಾಮಲಿಂಗಾಪುರ.
ಇ) ಎ.ಆರ್.ಡಬ್ಲ್ಯು.ಎಸ್ (ತ್ವರಿತ ಗ್ರಾಮಾಂತರ ನೀರು ಸರಬರಾಜು)		
1.	ಗುಬ್ಬಿ ತಾಲ್ಲೂಕು	-
2.	ಚಿಕ್ಕನಾಯ್ಕನಹಳ್ಳಿ	(ಅ) ಬೆಳ್ಳಾರೆ
3.	ಶಿರಾ	(ಅ) ಹುಣಸೇಕಟ್ಟೆ, (ಆ) ತುಪ್ಪದಕೋನ, (ಇ) ಕಾಳಗಂಧ, (ಈ) ಶಾಬದಡು.

ಮಂಜೂರಾತಿ ನೀಡಲಾದ ಸಾಲು	ಅಂದಾಜು ಮೊತ್ತ	ಇದುವರೆವಿಗೂ ಆಗಿರುವ ಖರ್ಚು ರೂ.ಲಕ್ಷದಲ್ಲಿ	ಷರಾ
4	5	6	7
-	-	-	ಯಾವುದೂ ಇಲ್ಲ.
-	-	-	"
1994-95	1.00	0.31	ರಾಜ್ಯವಲಯ (ಸಾಮಾನ್ಯ)
1993-94	1.00	0.30	ರಾಜ್ಯವಲಯ (ವಿಶೇಷ ಘಟಕ)
1994-95	1.00	0.67	ಕೇಂದ್ರ ವಲಯ (ಸಾಮಾನ್ಯ)
1993-94	1.00	0.87	ಕೇಂದ್ರ ವಲಯ (ವಿಶೇಷ ಘಟಕ)
1994-95	1.00	0.77	ಕೇಂದ್ರ ವಲಯ (ವಿಶೇಷ ಘಟಕ)
-	-	-	ಯಾವುದೂ ಇಲ್ಲ.
-	-	-	"
1993-94	3.76	0.26	ಜಲಮೂಲವಾಗಿದೆ
1994-95	4.00	0.31	"
1994-95	3.50	-	"
-	-	-	ಯಾವುದೂ ಇಲ್ಲ.
1991-92	2.87	4.43	ಕಾಮಗಾರಿ ಮುಕ್ತಾಯದ ಹಂತದಲ್ಲಿದೆ
1991-92	3.79	0.84	ಜಲಮೂಲವಾಗಿದೆ
1993-94	3.58	0.26	"
1994-95	3.00	0.22	"
1995-96	3.00	-	ಕೊಳವೆ ಬಾವಿ ಕೊರೆಯಲಾಗಿದೆ.